## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 09-12-2022

### ಗಾಂಧಿಗAಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 184/2022 ಕಲಂ 454, 457, 380 ಐಪಿಸಿ :-

ದಿನಾಂಕ 08/12/2022 ರಂದು 1000 ಗಂಟೆಗೆ ಅರ್ಜಿದಾರ ಗಣಪತಿ ತಂದೆ ಭೀಮಶಾ ಸಾಗರ ವಯ-39 ವರ್ಷ ಜಾ: ಎಸ್.ಸಿ. ಉ: ಖಾಸಗಿ ಕೆಲಸ ಸಾ: ಬ್ಯಾಂಕ ಕಾಲೋನಿ ಕುಂಬಾರವಾಡಾ ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆAದರೆ ಕಳೆದ 02 ತಿಂಗಳಿAದ ಶ್ರೀ ಶಂಭು ಸಾಗರ ರವರ ಮನೆಯಲ್ಲಿ ಬಾಡಿಗೆಯಿಂದ ಸಹ ಕುಟುಂಬದೊAದಿಗೆ ವಾಸವಾಗಿದ್ದು, ದಿನಾಂಕ 03/12/2022 ರಂದು ಮದ್ಯಾನ 1200 ಗಂಟೆಗೆ ನಮ್ಮ ಮನೆಗೆ ಬೀಗ ಹಾಕಿ ಸಂಭAಧಿಕರ ಕಾರ್ಯಕ್ರಮಕ್ಕೆ ಹಾಜರಾಗಲು ಚಾಂಗಲೇರಾ ಗ್ರಾಮಕ್ಕೆ ಹೊಗಿದ್ದು ಮರಳಿ ದಿನಾಂಕ 07-12-2022 ರಂದು ಬೇಳಗ್ಗ 0800 ಗಂಟೆಗೆ ಬೀದರಕ್ಕೆ ಬಂದು ನೋಡಲಾಗಿ ಮನೆಗೆ ಹಾಕಿದ ಬಾಗಿಲು ಕೀಲಿ ಮುರಿದು ಅಲಮಾರಾದಲ್ಲಿ ಇಟ್ಟಿದ್ದ ಬಂಗಾರದ ಕೀವಿಯ ನೋಲಕ ಅಂ. 05 ಗ್ರಾಮ ಅಂ.ಕಿ. 25000=00 ರೂ., ಬಂಗಾರದ ಗುಂಡುಗಳು 02 ಗ್ರಾಮ ಅಂ.ಕಿ. 5000=00, ಬೆಳ್ಳಿಯ ಚೈನು ಗಳು ಕಡಗಾ ಹಾಗು ಇತರೆ ಸಾಮಾನುಗಳು ಅಂ. 250 ಗ್ರಾಮ ಅಂ.ಕಿ. 12500=00 ರೂ, ನಗದು ಹಣ 2000=00 ರೂ ಹೀಗೆ ಒಟ್ಟು ಎಲ್ಲಾ ಸೇರಿ 44500/- ರೂ ಮೌಲ್ಯದ ವಸ್ತುಗಳು ಕಳವು ಆಗಿರುತ್ತವೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 177/2022 ಕಲಂ 379 ಐಪಿಸಿ :-

ದಿನಾಂಕಃ 08/12/2022 ರಂದು ಸಾಯಂಕಾಲ 16ಃ00 ಗಂಟೆಗೆ ಪಿರ್ಯಾದಿ ಶ್ರೀಮತಿ ಪ್ರಭಾವತಿ ಗಂಡ ಭೀಮಶ್ಯಾ ಮೇತ್ರೆ ವಯಃ 35 ವರ್ಷ ಉಃ ಕೂಲಿ ಕೆಲಸ ಸಾಃ ರಾಜೇಶ್ವರ ತಾಃ ಬಸವ ಕಲ್ಯಾಣ ಜಿಃ ಬೀದರ ರವರು ಠಾಣೆಗೆ ಬಂದು ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕಃ 08/12/2022 ರಂದು ಮುಂಜಾನೆ 11ಃ30 ಗಂಟೆಗೆ ತನ್ನ ಮಗನೊಂದಿಗೆ ಕನಕಟ್ಟಾ ಗ್ರಾಮದಿಂದ ಹುಮನಾಬಾದ ಬಸ್ ನಿಲ್ದಾಣಕ್ಕೆ ಬಂದು, ರಾಜೇಶ್ವರ ಕಡೆಗೆ ಹೋಗುವ ಬಸ್‌ಗಳ ಹತ್ತಿರ ಬಂದು ತನ್ನ ಪರ್ಸನಲ್ಲಿ 45000=00 ರುಪಾಯಿಗಳೊಂದಿಗೆ ಹೋಗುವಾಗ ಯಾರೊ ಅಪರಿಚಿತ ಕಳ್ಳರು ಸದರಿ ಹಣವನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಇದ್ದವು. ಗಾಬರಿಗೊಂಡು ಬಸ್ ನಿಲ್ದಾಣದಲ್ಲಿ ಎಲ್ಲಾ ಕಡೆಯೂ ತಿರುಗಾಡಿ ಹುಡುಕಿ ಸಾರ್ವಜನಿಕರಿಗೆ ವಿಚಾರ ಮಾಡಿದರು ಪರ್ಸ ಸಿಕ್ಕಿರುವುದಿಲ್ಲಾ. ಯಾರೋ ಅಪರಿಚಿತ ಕಳ್ಳರು ನನ್ನ ಕ್ಯಾರಿಬ್ಯಾಗಲ್ಲಿದ್ದ ಪರ್ಸನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂಥಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 125/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ: 08/12/2022 ರಂದು 10.00 ಗಂಟೆಗೆ ಠಾಣೆಯಲ್ಲಿ ಇದ್ದಾಗ ಸಂತಪೂರ ಗ್ರಾಮದ ವಡಗಾಂವ ರೋಡಿನ ಪಿ·ಡಬ್ಲೂ·ಡಿ ಕಛೇರಿಯ ಹತ್ತಿರ ರಸ್ತೆಯ ಮೇಲೆ ಸಾರ್ವಜನಿಕ ಸ್ಥಳದಲ್ಲಿ ಇಬ್ಬರೂ ವ್ಯಕ್ತಿಯು ಸಾರ್ವಜನಿಕರಿಂದ ಹಣ ಪಡೆದು ಆಕ್ರಮ ಮಟಕಾ ಚೀಟಿ ಬರೆದುಕೊಳ್ಳುವ ಚಟುವಟಿಕೆಯಲ್ಲಿ ತೊಡಗಿದ ಬಗ್ಗೆ ಮಾಹಿತಿ ಮೇರಗೆ ಸಿಬ್ಬಂದಿಯೊಂದಿಗೆ ಹೋಗಿ ಬಸವೇಶ್ವರ ವೃತ್ತದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ಮರೆಯಾಗಿ ನಿಂತು ನೋಡಲಾಗಿ ಇಬ್ಬರೂ ವ್ಯಕ್ತಿಗಳು

ಸಾರ್ವಜನಿಕರಿಂದ ಹಣ ಪಡೆದು ಅದೇಷ್ಟದ ಸಂಖ್ಯೆಗೆ ಹಣ ಹಚ್ಚಿದರೆ 1/-ರೂ ಗೆ 80/-ರೂ 10 ರೂ ಗೆ 800/-ರೂ ಕೊಡುತ್ತೇವೆ ಎಂದು ಹೇಳಿ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆದುಕೊಳ್ಳುತ್ತಿರುವುದನ್ನು ಖಚೀತ ಪಡಿಸಿಕೊಂಡು ದಾಳಿಮಾಡಿದಾಗ ಮಟಕಾ ಚೀಟಿ ಬರೆದುಕೊಡುತ್ತಿದ್ದ ವ್ಯಕ್ತಿಗೆ ಹಿಡಿದುಕೊಳ್ಳಲು ವಾಗ ಅದರಲ್ಲಿನಿಂದ ಒಬ್ಬ ವ್ಯೆಕ್ತಿಯು ಓಡಿ ಹೋಗಿದ್ದು ಇನ್ನೋಬ ವ್ಯೆಕ್ತಿ ಸಿಕ್ಕಿದ್ದು ಮಟಕಾ ಚೀಟಿಗೆ ಹಣ ಹಚ್ಚುತಿದ್ದ ಸಾರ್ವಜನಿಕರು ಓಡಿಹೋಗಿರುತ್ತಾರೆ· ವಶಕ್ಕೆ ಸಿಕ್ಕ ವ್ಯಕ್ತಿಗೆ ಹೆಸರು ವಿಳಾಸ ವಿಚಾರಿಸಿ ಅಂಗ ಪರಿಶಿಲನೆ·ಮಾಡಿ ನೋಡಲು ತನ್ನ ಹೆಸರು 1) ರಿಯಾಜಬೆಗ ತಂದೆ ಮುನಿರ ಬೇಗ ವ· 32 ವರ್ಷ ಜಾ/ಮುಸ್ಲಿಂ ಉ/ವ್ಯಾಪಾರ ಸಾ/ ಸಂತಪೂರ ಅಂತ ತಿಳಿಸಿದನು ನಂತರ ಆತನ ಹತ್ತಿರ ನಗದು ಹಣ 2130 /-ರೂ, ಅಂಕಿ ಸಂಖ್ಯೆ ಬರೆದ 1 ಮಟಕಾ ಚೀಟಿ,ಒಂದು ಪೆನ್ನು ನೇದ್ದನ್ನು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.